# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 454

2) ಸದಸ್ಯರ ಹೆಸರು : ಡಾ|| ಯತೀಂದ್ರ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು)

3) ಉತ್ತರಿಸಬೇಕಾದ ದಿನಾಂಕ : 13-08-2025

4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಮತ್ಸ್ಯಾಶ್ರಯ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳು ಮನೆ ನಿರ್ಮಿಸಲು ಆಸಕ್ತಿ ವಹಿಸದೇ ಮನೆಗಳು ರದ್ದು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಯಾವುದೇ ಮನೆಗಳನ್ನು ರದ್ದುಪಡಿಸಿರುವುದಿಲ್ಲ. |
| ಆ) | ಬಂದಿದ್ದಲ್ಲಿ ಕಳೆದ 3 ವರ್ಷಗಳಲ್ಲಿ ಈ ರೀತಿ ಎಷ್ಟು ಮನೆಗಳು ರದ್ದು ಆಗಿವೆ; ಈ ರೀತಿ ರದ್ದು ಆಗಲು ಕಾರಣಗಳೇನು; ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | 2022-23ನೇ ಸಾಲಿನಲ್ಲಿ ಮಂಜೂರಾದ 5000 ಮನೆಗಳ ಪೈಕಿ ವಿವಿಧ ವಿಧಾನಸಭಾ ಕ್ಷೇತ್ರಗಳಿಗೆ ಮತ್ಸ್ಯಾಶ್ರಯ ಯೋಜನೆಯಡಿ 4720 ಮನೆಗಳು ಹಾಗೂ ವಿವೇಚನಾ ಕೋಟಾದಡಿ 232 ಮನೆಗಳು ಹಂಚಿಕೆಯಾಗಿದ್ದು ಈ ಪೈಕಿ ಅನುಮೋದನೆಯಾಗದ 2573 ಹಾಗೂ ಹಂಚಿಕೆಗೆ ಬಾಕಿ ಉಳಿದಿರುವ 48 ಮನೆಗಳು ಸೇರಿ ಒಟ್ಟು 2621 ಮನೆಗಳನ್ನು ಹಿಂಪಡೆದು ಮರುಹಂಚಿಕೆ ಮಾಡಲಾಗಿದೆ. ಆದುದರಿಂದ ಯಾವುದೇ ಮನೆಗಳನ್ನು ರದ್ದುಪಡಿಸಿರುವುದಿಲ್ಲ.<br><br>2023-24 ನೇ ಸಾಲಿನಲ್ಲಿ ಯಾವುದೇ ಮನೆಗಳ ಹಂಚಿಕೆ ಮಾಡಿರುವುದಿಲ್ಲ.<br><br>2024-25 ನೇ ಸಾಲಿನಲ್ಲಿ 5600 + 1680 ಹೀಗೆ ಒಟ್ಟು 7280 ಮನೆಗಳನ್ನು ವಿವಿಧ ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಿ ಆದೇಶಿಸಲಾಗಿದೆ. ಅದರಂತೆ, ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. ಯಾವುದೇ ಮನೆಗಳನ್ನು ರದ್ದುಪಡಿಸಿರುವುದಿಲ್ಲ. |

ಸಂಖ್ಯೆ: ಪಸಂಮೀ ಇ-129 ಮೀಇಇ 2025

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು